ಡಾ।। ಹೆಚ್.ಡಿ. ಲಮಾಣಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):–

ಅ) 1990-91, 1991-92, 1992-93ನೇ ಸಾಲಿನಲ್ಲಿ ರಾಜ್ಯದ ನಗರ ಮತ್ತು ಪಟ್ಟಣ ಪ್ರದೇಶದ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಹೆಚ್ಚುವರಿ ಕೊಠಡಿಗಳ ನಿರ್ಮಾಣಕ್ಕಾಗಿ ಹಣ ಬಿಡುಗಡೆಯಾಗಿದೆ. (ಸರ್ಕಾರಿ ಆದೇಶದ ಪ್ರತಿಗಳನ್ನು ಸಂಬಂಧಿಸಿದ ಸದಸ್ಯರಿಗೆ ಪ್ರತ್ಯೇಕವಾಗಿ ಒದಗಿಸಲಾಗುವುದು).

ಆ) ಆಯಾ ಕ್ಷೇತ್ರದ ಶಾಸಕರು, ಶಾಲಾ ಸುಧಾರಣಾ ಸಮಿತಿ ಅಧ್ಯಕ್ಷರು, ನಾಗರೀಕರನ್ನೊಳಗೊಂಡಂತೆ ಶಾಲೆಗಳ ಕುಂದು ಕೊರತೆಗಳ ಸಮಿತಿಗಳಿಂದ ವಿನಂತಿಗಳು ಬಂದಿರುತ್ತವೆ. 1987ನೇ ಏಪ್ರಿಲ್ ಮಾಹೆಯಿಂದ ಜಿಲ್ಲಾ ಪರಿಷತ್ ಕಾರ್ಯಾಲಯಗಳ ಜವಾಬ್ದಾರಿಯಾಗಿರುವುದರಿಂದ ಸದರಿ ವಿನಂತಿ ಪತ್ರಗಳನ್ನು ಜಿಲ್ಲಾ ಪರಿಷತ್‌ಗಳಿಗೆ ಸಲ್ಲಿಸಿ ಆಯಾ ಜಿಲ್ಲೆಯ ಶಿಕ್ಷಣ ಉಪನಿರ್ದೇಶಕರು, ಜಿಲ್ಲಾ ಪರಿಷತ್ ಮುಖ್ಯ ಕಾರ್ಯದರ್ಶಿಯವರೊಂದಿಗೆ ವ್ಯವಹರಿಸಿ ಅವಶ್ಯವಿದ್ದೆಡೆ ಶಾಲಾ ಹೆಚ್ಚುವರಿ ಕೊಠಡಿಗಳನ್ನು ಪಟ್ಟಣಪ್ರದೇಶದಲ್ಲಿ ಜಿಲ್ಲಾಧಿಕಾರಿಗಳೊಂದಿಗೆ ವ್ಯವಹರಿಸಿ ಈ ಜವಾಬ್ದಾರಿಯನ್ನು ನೋಡಿಕೊಳ್ಳಲು ವಿನಂತಿಸಲಾಗಿದೆ.

ಇ) ಇಲ್ಲ, ಆದರೆ ವಿಶೇಷ ಸಂದರ್ಭಗಳಲ್ಲಿ ಮಾತ್ರ ಸರ್ಕಾರದ ಅನುಮತಿ ಪಡೆದು ಬದಲಾವಣೆ ಮಾರ್ಪಾಡು ಮಾಡಿಕೊಳ್ಳಲು ಅವಕಾಶವಿದೆ.

ಶ್ರೀ ಹೆಚ್.ವೈ. ಮೇಟಿ:– ನಾನು 1990-91, 1991-92, 1992-93ನೇ ಸಾಲಿನಲ್ಲಿ ರಾಜ್ಯದ ನಗರ ಮತ್ತು ಪಟ್ಟಣ ಪ್ರದೇಶದ ಸರ್ಕಾರಿ ಪ್ರಾಥಮಿಕ ಶಾಲೆಗಳ ಹೆಚ್ಚುವರಿ ಕೊಠಡಿಗಳನ್ನು ನಿರ್ಮಾಣ ಮಾಡುವುದಕ್ಕಾಗಿ ಸರ್ಕಾರ ಹಣ ಬಿಡುಗಡೆ ಮಾಡಿದ ಬಗ್ಗೆ ಸರ್ಕಾರದ ಆದೇಶದ ಪ್ರತಿಗಳನ್ನು ಲಗತ್ತಿಸುವುದು ಎಂದು ಪ್ರಶ್ನೆ ಕೇಳಿದ್ದರೆ, ಪ್ರತಿಗಳನ್ನು ಸದಸ್ಯರಿಗೆ ಪ್ರತ್ಯೇಕವಾಗಿ ಒದಗಿಸಲಾಗುವುದು ಎಂದು ಹೇಳಿದ್ದಾರೆ. ಈಗಲೇ ಕೊಡಬಹುದಲ್ಲ. ಅದೇ ರೀತಿ (ಆ) ಪ್ರಶ್ನೆಗೆ ಉತ್ತರವಾಗಿ ಶಹರದಲ್ಲಿ ಶಾಲಾ ಕಟ್ಟಡಗಳ ಬಗ್ಗೆ ಜಿಲ್ಲಾ ಪರಿಷತ್ತು ವಿಚಾರಣೆ ಮಾಡುತ್ತದೆಂದು ಹೇಳಿದ್ದಾರೆ. ಆದರೆ ನೇರವಾಗಿ ಅದು ಜಿಲ್ಲಾ ಪರಿಷತ್ತಿಗೆ ಸಂಬಂಧಪಡದಿರುವುದರಿಂದ ಈ ರೀತಿ ಉತ್ತರ ಹೇಳಿದ್ದು ಅಷ್ಟು ಸಮಂಜಸವಾಗುವುದಿಲ್ಲ. 3ನೇ ಪ್ರಶ್ನೆಗೆ ಉತ್ತರವಾಗಿ ಯಾವುದೇ ಶಾಲಾ ಕಟ್ಟಡಗಳನ್ನು ಬೇರೆ ಕಡೆಗೆ ವರ್ಗಾಯಿಸಬೇಕಾದರೆ ಸರ್ಕಾರದ ಅನುಮತಿ ಪಡೆದು ಬದಲಾಯಿಸುತ್ತೇವೆಂದು ಹೇಳಿದ್ದಾರೆ. ಆದರೆ ಲಿಂಗಸಗೂರು ತಾಲ್ಲೂಕಿನ ಮುದಗಲ್‌ನಲ್ಲಿ ಸರ್ಕಾರದ ಆದೇಶ ಇಲ್ಲದೆ ಬದಲಿ ಮಾಡಿದ್ದಾರೆ. ಅದಕ್ಕೆ ಯೋಗ್ಯ ಕ್ರಮ ತೆಗೆದುಕೊಳ್ಳುತ್ತೀರಾ ? ಅಲ್ಲಿ 5 ಕೋಣೆಗಳಿದ್ದು 4ನೇ ತರಗತಿಯವರೆಗೆ 147 ಮಕ್ಕಳಿದ್ದಾರೆ. ಅಲ್ಲಿ 5 ಕೋಣೆಗಳಿದ್ದರೂ 2 ಕೋಣೆಗಳನ್ನು ಬದಲಿ ಮಾಡಿ ಹೆಚ್ಚಿಗೆ ಕಟ್ಟಿದ್ದಾರೆ. ಆದರೆ ಮೇವಿನಪೇಟೆ ಎಂಬಲ್ಲಿ 3 ಕೊಠಡಿಗಳಿದ್ದು 5ನೇ ತರಗತಿಯವರೆಗೆ ಮಕ್ಕಳು ಓದುತ್ತಿದ್ದಾರೆ. ಅಲ್ಲಿದ್ದ 2 ಕೋಣೆಗಳನ್ನು ಬದಲಿ ಮಾಡಿ ಅಲ್ಲಿ ಹಾಕಿದ್ದಾರೆ. ಈ ಬಗ್ಗೆ ಯೋಗ್ಯಕ್ರಮ ತೆಗೆದುಕೊಳ್ಳಬೇಕೆಂದು ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಡಾ।। ಹೆಚ್.ಡಿ. ಲಮಾಣಿ:– ಸಾಮಾನ್ಯವಾಗಿ ಈ ರೀತಿ ಕಟ್ಟಡಗಳನ್ನು ವರ್ಗಾಯಿಸುವುದಕ್ಕಾಗುವುದಿಲ್ಲ. ಒಂದು ವೇಳೆ ಅವರು ಹೇಳಿದ ಪ್ರಕಾರ ಲಿಂಗಸುಗೂರಿನಲ್ಲಿ ಅಂಥದ್ದು ಏನಾದರೂ ಆಗಿದ್ದರೆ ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ. ಇದರಲ್ಲಿ ತಾವು ಕೊಟ್ಟಿಲ್ಲ; ತಾವು ಪ್ರತ್ಯೇಕವಾಗಿ ಬರೆದುಕೊಡಿ, ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಬೆಂಗಳೂರು ನಗರದಲ್ಲಿ ಮಕ್ಕಳ ಗ್ರಂಥಾಲಯದ ಕಟ್ಟಡ ನಿರ್ಮಾಣ

1828: ಶ್ರೀ ಆರ್. ದಯಾನಂದರಾವ್ (ಗಾಂಧಿನಗರ):–

ವಯಸ್ಕರ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ನಗರದಲ್ಲಿ ಮಕ್ಕಳ ಗ್ರಂಥಾಲಯ ಕಟ್ಟಲು ಸರ್ಕಾರ ಕ್ರಮ ತೆಗೆದುಕೊಂಡಿದೆಯೆ;

ಆ) ಹಾಗಿದ್ದಲ್ಲಿ ಇದಕ್ಕೆ ನಿವೇಶನವನ್ನು ಗುರುತಿಸಲಾಗಿದೆಯೇ;

ಇ) ಇದಕ್ಕೆ ಮಂಜೂರಾದ ಹಣ;

ಈ) ಇದನ್ನು ಸಂಪೂರ್ಣ ಮಾಡಲು ಬೇಕಾದ ಮೊತ್ತ;

ಉ) ಇದು ಯಾವಾಗ ತೆರೆಯಲಾಗುತ್ತದೆ ?

ಶ್ರೀ ಪ್ರಭಾಕರ ಎಸ್. ರಾಣೆ (ವಯಸ್ಕರ ಶಿಕ್ಷಣ ರಾಜ್ಯ ಸಚಿವರು):–

ಅ) ಹೌದು, 1993-94ನೇ ಸಾಲಿನಲ್ಲಿ ಕಟ್ಟಡ ನಿರ್ಮಿಸಲು ಯೋಚಿಸಲಾಗಿದೆ.

ಆ) ವಿಜಯನಗರ (ಮಾಗಡಿ ಕ್ರಾಸ್ ರೋಡ್)ದಲ್ಲಿ, 180 x 80 ಅಳತೆ ನಿವೇಶನದಲ್ಲಿ ಗುರುತಿಸಲಾಗಿದೆ.

ಇ) ಒಟ್ಟು 3 ಅಂತಸ್ತಿನ ಕಟ್ಟಡದಲ್ಲಿ 2 ಅಂತಸ್ತಿನಲ್ಲಿ ಮಕ್ಕಳ ಗ್ರಂಥಾಲಯಕ್ಕಾಗಿ ಕಾದಿರಿಸಲಾಗುವುದು. ಇದಕ್ಕೆ ತಗಲುವ ರೂ. 20.00ಲಕ್ಷ ವೆಚ್ಚವನ್ನು ನಗರ ಗ್ರಂಥಾಲಯ ಪ್ರಾಧಿಕಾರ ನಿಧಿಯಿಂದ ಭರಿಸಲಾಗುವುದು.

ಈ) 33.40 ಲಕ್ಷ.

ಉ) ಎರಡು ವರ್ಷದಲ್ಲಿ ಕಟ್ಟಣ ನಿರ್ಮಾಣ ಪೂರೈಸಿ ತೆರೆಯಲಾಗುವುದು.

ಶ್ರೀ ಆರ್. ದಯಾನಂದರಾವ್:– ಉತ್ತರದಲ್ಲಿ, 1993-94ನೇ ಸಾಲಿನಲ್ಲಿ ಕಟ್ಟಡ ನಿರ್ಮಿಸಲು ಯೋಚಿಸಲಾಗಿದೆ ಎಂದು ಹೇಳಿದ್ದಾರೆ, ಸಂತೋಷ. ವಿಜಯನಗರದ ಮಾಗಡಿ ಕ್ರಾಸ್ ರಸ್ತೆ ಹತ್ತಿರ ಎಂದು ಸ್ಥಳವನ್ನು ಕೂಡ ಹೇಳಿದ್ದಾರೆ. ಇದಕ್ಕೆ ಖರ್ಚು ಮಾಡುವ ಹಣ 33.40 ಲಕ್ಷ ಎಂದು ಹೇಳಿದ್ದಾರೆ. ಆದರೆ ವಿಜಯನಗರ ಬೆಂಗಳೂರಿನ ಕೊನೆಯಲ್ಲಿ ಇರತಕ್ಕದ್ದು. ಬೆಂಗಳೂರಿನಲ್ಲಿ ಮಕ್ಕಳು ಎಲ್ಲಾ ಮೂಲೆ ಮೂಲೆಗಳಿಂದ ಓದಲಿಕ್ಕೆ ಬರುತ್ತಾರೆ. ಅವರಿಗೆ ಒಂದು ಸೆಂಟರ್ ಪಾಯಿಂಟ್‌ನಲ್ಲಿ ಗ್ರಂಥಾಲಯವನ್ನು ಕಟ್ಟಿದರೆ ಚೆನ್ನಾಗಿರುತ್ತದೆ. ಇವತ್ತು ಕಬ್ಬನ್ ಪಾರ್ಕ್‌ನಲ್ಲಿ ಕೇಂದ್ರ ಗ್ರಂಥಾಲಯ ಇದೆ; ಅಲ್ಲಿ ಜನ ಹೋಗಿ ಓದುತ್ತಾರೆ. ಇಂಥ ಸ್ಥಳದಲ್ಲಿ ಕಟ್ಟಿದರೆ ಮಕ್ಕಳಿಗೆ ಆಟವಾಡಲು ಮತ್ತು ಓದಲು ಅನುಕೂಲವಾಗುತ್ತದೆ. ಎಲ್ಲೋ ಮೂಲೆಯಲ್ಲಿ ಗ್ರಂಥಾಲಯ ಕಟ್ಟಿದರೆ ಏನು ಪ್ರಯೋಜನ ? 33ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡುತ್ತಿದ್ದೀರಿ. ಆದ್ದರಿಂದ ಸೆಂಟರ್ ಪಾಯಿಂಟ್‌ನಲ್ಲಿ ಗ್ರಂಥಾಲಯ ಕಟ್ಟಿಕೊಟ್ಟರೆ ಮಕ್ಕಳಿಗೆ ಓದಲಿಕ್ಕೆ ಅನುಕೂಲವಾಗುತ್ತದೆಂದು ತಮ್ಮ ಮೂಲಕ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಪ್ರಭಾಕರ ಎಸ್. ರಾಣೆ:– ನಮ್ಮ ಉತ್ತರದಲ್ಲಿ ಈಗಾಗಲೇ ಹೇಳಿದ್ದೇವೆ. ವಿಜಯನಗರ, ಮಾಗಡಿ ಕ್ರಾಸ್ ರೋಡ್‌ನಲ್ಲಿ 180 x 80 ಅಳತೆಯ ನಿವೇಶನದಲ್ಲಿ ಮಕ್ಕಳ ಗ್ರಂಥಾಲಯ ಕಟ್ಟಡ ಕಟ್ಟುವುದಕ್ಕೆ ನಿರ್ಧರಿಸಲಾಗಿದೆ. ಯಾವುದೇ ಕಟ್ಟಡ ಕಟ್ಟುವುದಕ್ಕೆ ಅದರಲ್ಲೂ ಇಷ್ಟೊಂದು ದೊಡ್ಡ ಯೋಜನೆ ತಯಾರು ಮಾಡಿ ಕಟ್ಟುವುದಕ್ಕೆ ಪ್ರಮುಖವಾಗಿ ಬೇಕಾಗಿರುವುದು ಸ್ಥಳಾವಕಾಶ. ಮಾನ್ಯ ಸದಸ್ಯರ ಅಭಿಪ್ರಾಯದಂತೆ ನಗರದ ಮಧ್ಯದ ಸ್ಥಳದಲ್ಲಿ ಗ್ರಂಥಾಲಯ ಆಗಬೇಕೆಂದರೆ ನಗರದ ಮಧ್ಯದಲ್ಲಿ ಸೂಕ್ತವಾದ ಸ್ಥಳದಲ್ಲಿ ನಿವೇಶನ ಸಿಕ್ಕಿದರೆ ಅದರ ಬಗ್ಗೆ ಮರು ಪರಿಶೀಲನೆ ಮಾಡಬಹುದು.

ಆದರೆ ನಿವೇಶನ ಸಿಕ್ಕದೆ ಅಲ್ಲಿ ಮಾಡಬೇಕೆಂದರೆ ಅದು ಸಾಧ್ಯವಾಗುವುದಿಲ್ಲ. ಆ ದಿಸೆಯಲ್ಲಿ ಬೆಂಗಳೂರು ನಗರದ ಶಾಸಕರ ಮತ್ತು ಬೆಂಗಳೂರು ಮಹಾನಗರ ಪಾಲಿಕೆಯ ಜೊತೆ ಚರ್ಚಿಸಿ ಸೂಕ್ತ ಸ್ಥಳ ಸಿಕ್ಕಿದರೆ ಅದರ ಬಗ್ಗೆ ಪರಿಶೀಲಿಸಬಹುದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಆರ್. ದಯಾನಂದರಾವ್:– ಎಂಎಲ್ಎಗಳನ್ನು ತಾವು ಎಷ್ಟು ದಿವಸಗಳಲ್ಲಿ ಕರೆಸುತ್ತೀರಾ ? ಯಾವಾಗ ತಾವು ನಿರ್ಣಯವನ್ನು ತೆಗೆದುಕೊಳ್ಳುತ್ತೀರೆಂದು ನಿಖರವಾಗಿ ಸದನಕ್ಕೆ ತಿಳಿಸಿದರೆ ಒಳ್ಳೆಯದು.

ಶ್ರೀ ಪ್ರಭಾಕರ ಎಸ್. ರಾಣೆ:– ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಹೇಳಿದ್ದೇನೆ. ಸೂಕ್ತವಾದ ಸ್ಥಳ ಸಿಕ್ಕಿದರೆ ಆ ನಮ್ಮ ನಿರ್ಣಯವನ್ನು ಮರು ಪರಿಶೀಲನೆ ಮಾಡಬಹುದು. ವಿಚಾರವನ್ನೆಲ್ಲಾ ಶಾಸಕರಿಗೆ ತಿಳಿಸುತ್ತೇನೆ.

ಶ್ರೀ ಆರ್. ದಯಾನಂದರಾವ್:– ತಾವು ಮೇಯರ್ ಅವರನ್ನು ಕರೆಸಿ ಸ್ಥಳವನ್ನು ಕೇಳಿದರೆ ಅವರು ಕೊಡುವುದಕ್ಕೆ ಸಿದ್ಧರಿದ್ದಾರೆ.

ಶ್ರೀ ಪ್ರಭಾಕರ ಎಸ್. ರಾಣೆ:– ಎಲ್ಲಾ ಆಯಿತು ಎಂದು ಹೇಳಿದ್ದೇನೆ.

ಬೌರಿಂಗ್ ಹಾಗೂ ಲೇಡಿ ಕರ್ಜನ್ ಆಸ್ಪತ್ರೆಗೆ ಎದ್ಮುತ್ ದೋಬಿಖಾನೆ

1160: ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ):–

ವೈದ್ಯಕೀಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಎಲೆಕ್ಟ್ರಿಕ್ ಲಾಂಡ್ರಿ ಹಾಗೂ ಇನ್ಸಿನಿರೇಟರ್‌ಗಳನ್ನು ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಗೆ ಸರಬರಾಜು ಮಾಡಲು ಸರ್ಕಾರದಿಂದ ಪ್ರಸ್ತಾವನೆ ಆಗಿದೆಯೇ;

ಆ) ಮೇಲಿನ ಉಪಕರಣಗಳಿಂದ ಆಸ್ಪತ್ರೆ ಹಾಗೂ ಸುತ್ತಮುತ್ತಲಿನ ಪರಿಸರವು ಮಾಲಿನ್ಯಗೊಂಡಿದ್ದು ಅದರಿಂದ ಕಾಯಿಲೆಗೆ ದಾರಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಮೇಲಿನ ಉಪಕರಣಗಳನ್ನು ಆಸ್ಪತ್ರೆಗೆ ಬರುವ ರೋಗಿಗಳ ಉತ್ತಮ ಸೌಲಭ್ಯಕ್ಕಾಗಿ ಒದಗಿಸುವುದು ಅಗತ್ಯ ಇರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಜಿ. ರಾಮಕೃಷ್ಣ (ವೈದ್ಯಕೀಯ ಶಿಕ್ಷಣ ಸಚಿವರು):–

ಅ) ಪರಿಶೀಲನೆಯಲ್ಲಿದೆ.

ಆ) ಇಲ್ಲ.

ಇ) ಮೇಲಿನ ಉಪಕರಣಗಳನ್ನು ಒದಗಿಸುವ ಬಗ್ಗೆ ಪರಿಶೀಲನೆಯಲ್ಲಿದೆ.

ಶ್ರೀ ಎ.ಕೆ. ಅನಂತಕೃಷ್ಣ:– ಮಾನ್ಯ ಅಧ್ಯಕ್ಷರೇ, ಈ ಉತ್ತರ ಸಮಂಜಸವಾಗಿಲ್ಲ ಎಂದು ಹೇಳಬಯಸುತ್ತೇನೆ. ಸುಮಾರು ಮೂರು ವರ್ಷಗಳಿಂದ ಈ ಪ್ರಶ್ನೆ ಹಾಕುತ್ತಿದ್ದೇನೆ. ಇಬ್ಬರು ಮುಖ್ಯಮಂತ್ರಿಗಳು ಆಸ್ಪತ್ರೆಗೆ ಬಂದು ಹೋಗಿದ್ದಾರೆ. ಇಬ್ಬರು ಆರೋಗ್ಯ ಮಂತ್ರಿಗಳು ಬಂದು ಹೋಗಿದ್ದಾರೆ. ಎಲ್ಲರೂ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಬೆಂಗಳೂರಿನ ಪ್ರಮುಖವಾದ ಬೌರಿಂಗ್ ಆಸ್ಪತ್ರೆಗೆ ಅವಶ್ಯಕವಾಗಿ ಎಲೆಕ್ಟ್ರಿಕ್ ಲಾಂಡ್ರಿ ಹಾಗೂ ಇನ್ಸಿನಿರೇಟರ್ ಬೇಕು ಎಂದರೆ ಇನ್ನೂ ಪರಿಶೀಲನೆಯಲ್ಲಿ ಇದೆ ಎಂದರೆ ಇನ್ನು ಯಾವ ಕಾಲಕ್ಕೆ ಸ್ವಾಮಿ ಕೊಡುವುದು ? ಮಾನ್ಯ